# ನಿಸ್ಪಂದನೆ

## ವನ್ಯಜೀವಿ ಸಂತತಿ ಉಳಿಸೋಣ

ಬಂಡೀಪುರ ಉದ್ಯಾನವನ್ನು ಹಾದು ಹೋಗುವ ಹೆದ್ದಾರಿಯಲ್ಲಿ ರಾತ್ರಿ ವಾಹನ ಸಂಚಾರ ನಿಷೇಧವನ್ನು ಸುಪ್ರೀಂಕೋರ್ಟ್ ಕೂಡ ಮೆಚ್ಚಿಕೊಂಡಿದೆ. ಇತರ ರಾಷ್ಟ್ರೀಯ ಉದ್ಯಾನಗಳಲ್ಲೂ ಏಕೆ ಈ ಬಗೆಯ ನಿರ್ಬಂಧವನ್ನು ಅಳವಡಿಸಬಾರದು ಎಂದೂ ಅದು ಕೇಳಿದೆ. ಆದರೆ, ಈ ನಿರ್ಬಂಧವನ್ನು ಹೇಗಾದರೂ ಸಡಿಲಿಸಬೇಕು ಎಂದು ಕೇರಳ ಮೇಲಿಂದ ಮೇಲೆ ಒತ್ತಡ ಹೇರಿ ಅಂತರ್‌ರಾಜ್ಯ ಸಮಸ್ಯೆಯನ್ನಾಗಿ ಮಾರ್ಪಡಿಸುತ್ತಿರುವುದು ವಿಪರ್ಯಾಸದ ಸಂಗತಿ.




ರಸ್ತೆ ಹಾಗೂ ರೈಲು ಮಾರ್ಗಗಳು ಯಾವುದೇ ದೇಶದ ಅಭಿವೃದ್ಧಿಯ ಜೀವನಾಡಿ. ಜನಸಂಚಾರಕ್ಕೆ ಹಾಗೂ ಸರಕು ಸಾಗಣೆಗೆ ಅತ್ಯವಶ್ಯ ಮೂಲ ಸೌಕರ್ಯ. ಆದರೆ ಅರಣ್ಯಗಳ ಮಧ್ಯೆ ಹಾದು ಹೋಗುವ ಇದೇ ಹೆದ್ದಾರಿ ಮತ್ತು ರೈಲು ಮಾರ್ಗಗಳು ಪ್ರಾಣಿ ಸಂಕುಲಕ್ಕೆ ಪ್ರಾಣಾಂತಿಕವಾಗಿ ಪರಿಣಮಿಸಿವೆ. ಇಂತಹ ಮಾರ್ಗಗಳಲ್ಲಿ ವೇಗವಾಗಿ ಚಲಿಸುವ ರೈಲು ಹಾಗೂ ವಿವಿಧ ಬಗೆಯ ವಾಹನಗಳಿಗೆ ಸಿಲುಕಿ ವನ್ಯಜೀವಿಗಳು ಸಾವನ್ನಪ್ಪಿದ ಸುದ್ದಿಗಳು ನಾಡಿನ ಯಾವುದೋ ಮೂಲೆಯಿಂದ ಆಗಿಂದಾಗ್ಗೆ ವರದಿಯಾಗುತ್ತಲೇ ಇವೆ. ಆದರೂ ವಿಲಾಸಿ ಜೀವನಕ್ಕೆ ಜೋತುಬಿದ್ದಿರುವ ಜನಸಮುದಾಯ ಮತ್ತು ನಮ್ಮನ್ನು ಆಳುವ ಸರ್ಕಾರಗಳು ಎಚ್ಚೆತ್ತುಕೊಂಡಿಲ್ಲ ಎಂಬುದು ನೋವಿನ ಸಂಗತಿ.

1972ರಲ್ಲಿ ಹುಲಿ ಯೋಜನೆಯನ್ನು ಅಳವಡಿಸಲು ಆಯ್ದುಕೊಂಡ ದೇಶದ ಒಂಬತ್ತು ವನ್ಯಜೀವಿ ಧಾಮಗಳಲ್ಲಿ ನಮ್ಮ ಬಂಡೀಪುರವೂ ಒಂದು. ಈ ರಾಷ್ಟ್ರೀಯ ಉದ್ಯಾನದ ಮೂಲಕ ಹಾದು ಹೋಗುವ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ (ಸಂಖ್ಯೆ 67 ಹಾಗೂ 212) ರಾತ್ರಿ ವೇಳೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಅದೂ ಕರ್ನಾಟಕ ಹೈಕೋರ್ಟ್, 2010ರ ಮಾರ್ಚ್ ತಿಂಗಳಲ್ಲಿ ನೀಡಿದ ಆದೇಶದ ಮೇರೆಗೆ ರಾತ್ರಿ 9ರಿಂದ ಬೆಳಿಗ್ಗೆ 6 ಗಂಟೆಯವರೆಗೆ ವಾಹನ ಸಂಚಾರ ನಿಷೇಧಿಸಲಾಗಿದೆ. ಆಂಬುಲೆನ್ಸ್, ಅಗ್ನಿಶಾಮಕದಂಥ ತುರ್ತು ಸೇವೆಯ ಕೆಲವು ವಾಹನಗಳಿಗೆ ಮಾತ್ರ ವಿನಾಯ್ತಿ ಇದೆ. ಈ ನಿಷೇಧದ ಫಲವಾಗಿ  ರಾತ್ರಿ ವೇಳೆ ಪ್ರಾಣಿಗಳು ಮುಕ್ತವಾಗಿ ಸಂಚರಿಸಲು ಅನುಕೂಲವಾಗಿದೆ. ವನ್ಯಜೀವಿ ಸಂರಕ್ಷಣೆಯ ದೃಷ್ಟಿಯಿಂದ ಇದು ಮಹತ್ವದ ನಿರ್ಧಾರ ಎಂಬುದು ವನ್ಯಜೀವಿ ತಜ್ಞರ ಅಭಿಪ್ರಾಯ.

ಆದರೆ ಈ ನಿರ್ಬಂಧ, ನೆರೆಯ ಕೇರಳಕ್ಕೆ ಅಪಥ್ಯವಾಗಿದೆ. ನಿರ್ಬಂಧ ಸಡಿಲಿಸುವಂತೆ ಕರ್ನಾಟಕದ ಮೇಲೆ ಸತತವಾಗಿ ಒತ್ತಡ ಹೇರುತ್ತಲೇ ಇದೆ. ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ಇರುವುದರಿಂದ, ಅದೇ ನೆಪ ಹೇಳಿ ಇಲ್ಲಿನ ಸರ್ಕಾರ ಯಾವುದೇ ಖಚಿತ ಆಶ್ವಾಸನೆ ನೀಡದೆ ಜಾರಿಕೊಳ್ಳುತ್ತಿದೆ. ರಾತ್ರಿ ವೇಳೆ ಸಂಚಾರಕ್ಕೆ ಅಡ್ಡಿಯಾಗದಂತೆ ಕೇರಳಕ್ಕೆ ಸಂಪರ್ಕ ಕಲ್ಪಿಸುವ ಎರಡು ಪರ್ಯಾಯ ರಸ್ತೆಗಳನ್ನು ಕರ್ನಾಟಕ ಸರ್ಕಾರ, 73 ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿದೆ. ಆದರೂ ಅವರಿಗೆ ಸಮಾಧಾನ ಇಲ್ಲ. ಕಾರಣ: ಪರ್ಯಾಯ ರಸ್ತೆ ಮೂಲಕ ಸಂಚಾರ ತುಸು ಬಳಸು. ಸುಮಾರು 35 ಕಿ.ಮೀ.ನಷ್ಟು ಹೆಚ್ಚು ದೂರ ಕ್ರಮಿಸಬೇಕಾಗುತ್ತದೆ. ವನ್ಯಜೀವಿ ಸಂರಕ್ಷಣೆಗಿಂತ ದಾರಿ ತುಸು ಬಳಸು ಎನ್ನುವುದೇ ದೊಡ್ಡ ವಿಷಯವಾಗಿರುವುದು, ಅಂತರ್‌ರಾಜ್ಯ ಸಮಸ್ಯೆಯಾಗಿರುವುದು ವಿಪರ್ಯಾಸದ ಸಂಗತಿ. ನಮ್ಮ ಸುಖಲೋಲುಪತೆಗೆ ಕೆಟ್ಟ ನಿದರ್ಶನವಾಗಿ ಇದನ್ನು ಪರಿಗಣಿಸಬಹುದೇನೋ?

ಬಂಡೀಪುರ ಉದ್ಯಾನವನ್ನು ಹಾದು ಹೋಗುವ ಹೆದ್ದಾರಿಯಲ್ಲಿ ರಾತ್ರಿ ವಾಹನ ಸಂಚಾರ ನಿಷೇಧಿಸಿರುವ  ನಿರ್ಧಾರವನ್ನು ಸುಪ್ರೀಂಕೋರ್ಟ್ ಕೂಡ ಮೆಚ್ಚಿಕೊಂಡಿದೆ. ಇತರ ರಾಷ್ಟ್ರೀಯ ಉದ್ಯಾನಗಳಲ್ಲೂ ಏಕೆ ಈ ಬಗೆಯ ನಿರ್ಬಂಧವನ್ನು ಅಳವಡಿಸಬಾರದು ಎಂದೂ ಕೇಳಿದೆ. ಆದರೆ, ಈ ನಿರ್ಬಂಧವನ್ನು ಹೇಗಾದರೂ ಸಡಿಲಿಸಬೇಕು ಎಂದು ಕೇರಳ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಪಟ್ಟು ಹಿಡಿದಂತಿದ್ದಾರೆ. ಈ ಸಲುವಾಗಿ ಚರ್ಚಿಸಲು ಬೆಂಗಳೂರಿಗೆ ನಾಲ್ಕೋ ಐದೋ ಬಾರಿ ಬಂದಿದ್ದಾರೆ. ಈ ಸಲ ಅವರು ಬಂದು ಚರ್ಚಿಸಿದ ಸುದ್ದಿ ಪ್ರಕಟವಾದ ದಿನವೇ (ಏ.16) ವನ್ಯಜೀವಿಗಳೆರಡು ಅಪಘಾತಕ್ಕೆ ಬಲಿಯಾದ ಸುದ್ದಿಯೂ ಪತ್ರಿಕೆಗಳಲ್ಲಿ ಇತ್ತು. ಇದೇ ರಾಷ್ಟ್ರೀಯ ಉದ್ಯಾನದ ಮೂಲೆಹೊಳೆ ವ್ಯಾಪ್ತಿಯಲ್ಲಿ ಜಿಂಕೆ ಜಾತಿಗೆ ಸೇರಿದ ಬರ್ಕವೊಂದು ವಾಹನಕ್ಕೆ ಸಿಲುಕಿ ಮೃತಪಟ್ಟಿತ್ತು. ಬೆಳಗಾವಿ ಜಿಲ್ಲೆಯ ಖಾನಾಪುರ ಬಳಿಯ ಲೋಂಡಾ ವಲಯದಲ್ಲಿ ಕಾಡುಕೋಣವೊಂದು ರೈಲಿಗೆ ಸಿಲುಕಿ ಸಾವಪ್ಪಿದ ಸಚಿತ್ರ ಸುದ್ದಿಯೂ ಇತ್ತು. ಬಂಡೀಪುರ ಭಾಗದ ಎರಡು ಪ್ರಮುಖ ರಸ್ತೆಗಳಲ್ಲಿಯೇ ನಾಲ್ಕು ವರ್ಷಗಳಲ್ಲಿ 194 ಪ್ರಾಣಿಗಳು ರಸ್ತೆ ಅಪಘಾತಕ್ಕೆ ಬಲಿಯಾಗಿವೆ. ಇಲ್ಲಿ ನಿತ್ಯ ಐದು ಸಾವಿರ ವಾಹನಗಳು ಸಂಚರಿಸುತ್ತವೆ ಎಂದು ಹೇಳಲಾಗಿದೆ. ಇದೆಲ್ಲ ಗೊತ್ತಿದ್ದೂ ರಾತ್ರಿ ವೇಳೆಯ ಸಂಚಾರ ನಿರ್ಬಂಧ ಸಡಿಲಿಸುವಂತೆ ಒತ್ತಾಯಿಸುವುದು ನ್ಯಾಯೋಚಿತವೆನಿಸದು. ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ಮಹತ್ವದ ವಿಷಯಗಳಲ್ಲಿ ಯಾವುದೇ ಲಾಬಿಗೆ, ರಾಜಕೀಯ ಒತ್ತಡಗಳಿಗೆ ಮಣಿಯಲೇಬಾರದು. ಈ ಕ್ಷಣದ ಲಾಭ–ನಷ್ಟಕ್ಕಿಂತ, ದೂರಗಾಮಿ ಪರಿಣಾಮಗಳೇ ನಮ್ಮ ನೀತಿ–ನಿಲುವುಗಳಿಗೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಬೇಕು.

■ ಎನ್.ಉದಯಕುಮಾರ್